ಪಾಪಯ್ಯ' ಎಂಬ ಜನಪ್ರಿಯ ಅಂಕಣವನ್ನು 'ಪುಂಗನೂರು ಪಾಪಯ್ಯ' ಎಂಬ ಗುಪ್ತನಾಮದಲ್ಲಿ ಬರೆದವರು ಶಿವಸ್ವಾಮಿಗಳು. ಪಿ.ಜಿ. ವುಡ್‌ಹೌಸಿನ ಅತ್ಯಂತ ಜನಪ್ರಿಯ 'ಜೀವ್ಸ್'ನನ್ನು ಕನ್ನಡಕ್ಕೆ ಜೀವಣ್ಣನಾಗಿ ಕರೆತಂದವರು ಅವರೇ.

ಬಿ.ಎಸ್ಸಿ. ಆನರ್ಸ್ ಓದಿ ಬರೋಡದ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾಗ 'ಆಲ್ ಇಂಡಿಯಾ ರೇಡಿಯೋ'ದಲ್ಲಿ ಕೆಲಸಕ್ಕೆ ಅರ್ಜಿ ಗುಜರಾಯಿಸಿ ಹುದ್ದೆ ಗಿಟ್ಟಿಸಿಕೊಂಡರು. 1944ರಲ್ಲಿ ಆಕಾಶವಾಣಿ ಸೇರಿ ಉನ್ನತಾಧಿಕಾರಿಯಾಗಿ ಮದ್ರಾಸ್, ಮುಂಬೈ, ದೆಹಲಿ, ತಿರುವನಂತಪುರ ಸುತ್ತಿಕೊಂಡು ಬೆಂಗಳೂರು ಆಕಾಶವಾಣಿಯಲ್ಲಿ ನಿರ್ವಹಣಾಧಿಕಾರಿಯಾದರು. ನಾಟಕ–ಸಂಗೀತದತ್ತ ಅವರಿಗೆ ವಿಶೇಷ ಒಲವು. ಕೈಲಾಸಂ ನಾಟಕಗಳನ್ನು ಅವರೇ ಆಡುತ್ತಿದ್ದರು. ನ್ಯಾಷನಲ್ ಕಾಲೇಜಿನ ಹಿಸ್ಟ್ರಾನಿಕ್ಸ್ ಕ್ಲಬ್‌ನ ಸದಸ್ಯರಾಗಿದ್ದರು. 'ಕತೆಗಾರ' ಪತ್ರಿಕೆಯಲ್ಲಿ ಅವರ ಹಲವಾರು ಕಥೆಗಳು ಪ್ರಕಟವಾಗಿದ್ದವು. ಪತ್ರಕರ್ತ ವೈ.ಎನ್. ಕೆ. ಅವರ ಒಡನಾಡಿಯಾಗಿದ್ದು ಅವರ ಆಪ್ತ ಬಳಗದ ಖಾಯಂ ಸದಸ್ಯರಾಗಿದ್ದರು. ಸುಪ್ರಸಿದ್ಧ ಸಂಗೀತಗಾರರ ನೇರ ಸಂಪರ್ಕ ಅವರಿಗಿತ್ತು. ಜಿ.ಎನ್. ಬಾಲಸುಬ್ರಮಣ್ಯಂ ಆಕಾಶವಾಣಿಗೆ ಬಂದಾಗಲೆಲ್ಲ ದೊಡ್ಡ ಗುಂಪೇ ಸೇರುತ್ತಿತ್ತು. ಹಾಸ್ಯ ಸಂಭಾಷಣೆಯಲ್ಲಿ ವೀಣೆ ದೊರೆಸ್ವಾಮಿ ಅಯ್ಯಂಗಾರ್, ಆರ್.ಕೆ. ಶ್ರೀಕಂಠನ್, ಡಾ. ಎಚ್.ಕೆ. ರಂಗನಾಥ್ ಹಾಗೂ ಎಂ.ಎಸ್. ಕೆ. (ಕೃಷ್ಣಮೂರ್ತಿ ವಾಸುದೇವಾಚಾರ್ಯರ ಮೊಮ್ಮಗ) ಪಾಲ್ಗೊಳ್ಳುತ್ತಿದ್ದರಂತೆ. ಇಂತಹ ಅನೌಪಚಾರಿಕ ಹಾಸ್ಯಗೋಷ್ಠಿಯಲ್ಲಿ ಸಂಭ್ರಮಿಸಿದ ಸವಿಗಳಿಗೆಯನ್ನು ಅವರೆಲ್ಲ ಬಹಳ ವರ್ಷಗಳ ಕಾಲ ಮೆಲುಕು ಹಾಕುತ್ತಿದ್ದುದನ್ನು ಅನೇಕರು ಸ್ಮರಿಸುತ್ತಾರೆ.

ಮದ್ರಾಸಿನಲ್ಲಿದ್ದಾಗ ಬಿ.ಆರ್. ಪಂತಲು ಹಾಗೂ ಬೀchi ಅವರನ್ನು ನಿಲಯಕ್ಕೆ ಕರೆತಂದು ರೇಡಿಯೊ ನಾಟಕಗಳನ್ನು ಮಾಡಿಸುತ್ತಿದ್ದರಂತೆ. ಬಾನುಲಿ ನಾಟಕದ ಪರಿಕಲ್ಪನೆ ಹುಟ್ಟಿದ್ದೇ ಆಗ. ಮುಂದೆ ಗ್ರಾಂಡ್‌ಸ್ಲಾಮ್ ಎಂಬ ವಿಡಂಬನೆಯ ಪ್ರಯೋಗವನ್ನು ಎಲ್ಲ ಭಾಷೆಗಳಲ್ಲೂ ಆಡಿಸಿ




ವಿದೇಶ ಪ್ರಸಾರದಲ್ಲೂ ಬಿತ್ತರಣೆ ಮಾಡಿದ ಹೆಗ್ಗಳಿಕೆ ಅವರದು. ಕೈಲಾಸಂ ಅಧ್ಯಕ್ಷತೆಯಲ್ಲಿ ಮದರಾಸಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಅಲ್ಲಿಗೆ ಬಂದಿದ್ದ ಸಾಹಿತ್ಯ ದಿಗ್ಗಜರಾದ ಕೈಲಾಸಂ, ರಾ.ಶಿ., ನಾ. ಕಸ್ತೂರಿ, ಸಿ.ಕೆ. ವೆಂಕಟರಾಮಯ್ಯ, ವಿ.ಸೀ., ಬೇಂದ್ರೆ ಹಾಗೂ ಮಾಸ್ತಿಯವರನ್ನು ಆಕಾಶವಾಣಿಗೆ ಕರೆದುತಂದು ಒಂದು ದಿಢೀರ್ ಗೋಷ್ಠಿ ಏರ್ಪಡಿಸಿದ್ದರು. ಅದರ ಫಲವಾಗಿ ಒಂದು ಅಪರೂಪದ ಅಮೂಲ್ಯ ಫೋಟೊ ಕನ್ನಡಿಗರಿಗೆ ದಕ್ಕಿತು. ಆ ಅಮೂಲ್ಯ ಆಸ್ತಿಯನ್ನು 'ಸುಧಾ' ಪತ್ರಿಕೆಗೆ ದಯಪಾಲಿಸಿ ಅದನ್ನು ನೋಡುವ ಸೌಭಾಗ್ಯ ನಮಗೆಲ್ಲ ಕೊಟ್ಟವರು ಸ್ವಾಮಿಗಳು (ಸುಧಾ, 13–3–2003).

'ಜ್ಞಾನವಾಣಿ' ರೇಡಿಯೊ ಶಿಕ್ಷಣ ಚಾನೆಲ್ ಕೊಟ್ಟ ಕೀರ್ತಿಯೂ ಎಸ್.ಎನ್.ಎಸ್.ಗೆ ಸಲ್ಲುತ್ತದೆ. ಆಕಾಶವಾಣಿಗೆ ಜಾಹೀರಾತಿನ ಕಲ್ಪನೆ ಪರಿಚಯಿಸಿದವರು ಕೂಡ ಶಿವಸ್ವಾಮಿಗಳೇ. ಹೀಗಾಗಿ ನಿವೃತ್ತಿಯ ಅಂಚಿನಲ್ಲಿ ಭಾರತ ಸರ್ಕಾರದ ದೂರದರ್ಶನದ ವಾಣಿಜ್ಯ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು.

ತಮ್ಮ ಬಗ್ಗೆಯಾಗಲೀ ಕುಟುಂಬದವರ ಬಗ್ಗೆಯಾಗಲೀ ಅವರು ಎಂದೂ ಎಲ್ಲೂ ಹೇಳಿಕೊಂಡವರಲ್ಲ. ಟಿ.ಪಿ. ಕೈಲಾಸಂರವರ ಹತ್ತಿರದ ಸಂಬಂಧಿ ಎನ್ನುವುದು ಕೆಲವರಿಗಷ್ಟೇ ತಿಳಿದ ವಿಷಯ. ಶಿವು ಅವರ ಸಹೋದರರೆಲ್ಲಾ ಅವರದ್ದೇ ಕ್ಷೇತ್ರದಲ್ಲಿ ದಿಗ್ಗಜರು. ಪ್ರಸಿದ್ಧ ಕಲಾ ವಿಮರ್ಶಕರಾದ ಎಸ್.ಎನ್. ಚಂದ್ರಶೇಖರ್, ಸೇವಾದಳದ ಪ್ರಮುಖ ನಾಯಕ ಎಸ್.ಎನ್. ಸುಬ್ಬರಾವ್ ಅವರಲ್ಲಿ ಮುಖ್ಯರು.

'ಸುಧಾ' ಪತ್ರಿಕೆಯಲ್ಲಿ ಸದಭಿರುಚಿ ಹಾಸ್ಯ ಪ್ರಸಾರಕ್ಕಾಗಿ 'ನಗೆಹೊನಲು' ಹರಿವು ಪ್ರಾರಂಭವಾದಾಗ ಸ್ವಾಮಿಗಳು ಮೊದಲಿಗರಾಗಿ ಒಳ್ಳೊಳ್ಳೆ ನಗೆಹನಿಗಳನ್ನು ಕೊಟ್ಟರು. ನವಕರ್ನಾಟಕ ಪ್ರಕಾಶನದವರು ಪಾಕೆಟ್ ಸಿರೀಸ್‌ನಲ್ಲಿ 'ನಗೆ ಬುಗ್ಗೆ', 'ನಗೆಮಿಂಚು', 'ನಗೆ ತುಂತುರು', 'ನಗೆ ಮುಗಿಲು', 'ನಗೆ ಗೊಂಚಲು' ಕೃತಿಗಳನ್ನು ಹೊರತಂದಿದ್ದಾರೆ.

'ಪ್ರಜಾವಾಣಿ'ಯಲ್ಲಿ ಶಿವಸ್ವಾಮಿಗಳು ಬೇಕಾದಷ್ಟು ವಿಡಂಬನೆಗಳನ್ನು ಬರೆದರು. ಅದರಿಂದಾಗಿ 'ಬೂಸ ದಹನ' ಸಂಕಲನ ಹೊರಬಂದಿತು. ಕಿರಿಯ ಲೇಖಕರೆಲ್ಲ ಸೇರಿ ರೂಪಿಸಿಕೊಂಡ 'ಹಾಸ್ಯ ಲೇಖಕರ ಒಕ್ಕೂಟ' (ಹಾಸ್ಯಬ್ರಹ್ಮ)ದಲ್ಲಿ ಸಕ್ರಿಯ ಪಾತ್ರ ವಹಿಸಿ ಮಾರ್ಗದರ್ಶಕರಾದರು. ಸಮಾನ ಮನಸ್ಕರಿಗೆ ಸಮಾನ ವಯಸ್ಸಿನವರು ಇರಬೇಕಾಗಿಲ್ಲ ಎಂದು ತಮ್ಮ ನಡವಳಿಕೆಯಿಂದ ತೋರಿಸಿಕೊಟ್ಟರು. ಅವರ ಆತ್ಮೀಯತೆ ಹಾದಿ ಸರಳತೆ ನಮ್ಮೆಲ್ಲರನ್ನು ಅವರ ಹತ್ತಿರ ಸೆಳೆಯಿತು. ಆಗಾಗ್ಗೆ ಅವರ ಮನೆ ನಮ್ಮ ತಂಗುದಾಣವಾಯಿತು. ಹೇಳಿದ ಸಮಯಕ್ಕೆ ಮುಂಚೆಯೇ ನಮಗಾಗಿ ಕಾಯುತ್ತಾ ಮನೆ ಮುಂದೆ ಠಳಾಯಿಸುತ್ತಿದ್ದರು. ನಮಗೆ ಸಮಯಪ್ರಜ್ಞೆ ಮುಖ್ಯ ಎಂದು ಸಾರಿ ಹೇಳುತ್ತಿತ್ತು. ನಮ್ಮ ಜೀವನದಲ್ಲಿ ಹಾಗೂ ನಾವು ನಡೆಸುತ್ತಿದ್ದ ಹಾಸ್ಯೋತ್ಸವಗಳಲ್ಲಿ ಆ ಶಿಸ್ತು ನಮಗೆ ದಾರಿದೀಪವಾಯಿತು.

ಬರೆದದ್ದು ಕಮ್ಮಿ, ಆದರೆ ಎಲ್ಲ ಅಮೂಲ್ಯ. 'ಲಕ್ಕವಳ್ಳಿಯಲ್ಲಿ ಲಾಲಿಪಪ್ಸ್', 'ಮನೆಯೊಳಗೊಬ್ಬ ಮಿಲಿಟರಿ ಮಾಮ', 'ಜಾತ್ರೆಯಲ್ಲಿ ಜಾಗರಣೆ', 'ಸಿನ್ಸಿನಾಟಿಯಲ್ಲಿ ಕರಿಬೇವು ಸೊಪ್ಪು', 'ಹಾಸ್ಯಾವತಾರ', 'ಏನೇ ಬರಲಿ ರಮ್ಮಿ ಇರಲಿ' ರಚನೆಗಳು ಜನಪ್ರಿಯವಾದವು. ಸಿಕ್ಕ ಪ್ರಶಸ್ತಿ ಒಂದೇ – ಪರಮಾನಂದ ಪ್ರಶಸ್ತಿ. ಶಿವಸ್ವಾಮಿ ಹಾಗೂ ಟಿ. ಸುನಂದಮ್ಮನವರನ್ನು ಒಂದೇ ವೇದಿಕೆಯಲ್ಲಿ ಗೌರವಿಸುವ ಸೌಭಾಗ್ಯ ದೊರೆತದ್ದು, 'ಹಾಸ್ಯಬ್ರಹ್ಮ ಟ್ರಸ್ಟ್' ಹಾಗೂ 'ಕೊರವಂಜಿ–ಅಪರಂಜಿ ಟ್ರಸ್ಟ್'ಗೆ ಸಲ್ಲಬೇಕಾದ ಮನ್ನಣೆ.

ಇದು ಶಿವಸ್ವಾಮಿ ಅವರ ಜನ್ಮಶತಮಾನೋತ್ಸವ ಸಮಯ. ಈಗಲಾದರೂ ಅವರ ಹಾಸ್ಯ ಬರಹಗಳ ಸಮಗ್ರ ಸಂಕಲನ ಬರುವುದಾದರೆ ಹಾಸ್ಯ ಕ್ಷೇತ್ರಕ್ಕೆ ಒಂದು ಗೌರವ ಸಿಕ್ಕ ಹಾಗೆ ಆಗುತ್ತದೆ. ರಾಷ್ಟ್ರಪಕ್ಷಿ, ರಾಷ್ಟ್ರಭಾಷೆ, ರಾಷ್ಟ್ರಗೀತೆ ಇರುವಂತೆ ಹಾಸ್ಯ ರಾಷ್ಟ್ರೀಯ ರಸವಾಗಬೇಕೆಂದು ಆಗಾಗ್ಗೆ ಶಿವಸ್ವಾಮಿಗಳು ಹೇಳುತ್ತಿದ್ದುದು ಕಿವಿಯಲ್ಲಿ ಅನುರಣಿಸುತ್ತದೆ.


ಹಾಸ್ಯ ಲೇಖಕಿ ಟಿ. ಸುನಂದಮ್ಮ ಅವರೊಂದಿಗೆ ಶಿವಸ್ವಾಮಿ ದಂಪತಿ